ಶ್ರೀ ಪಿ. ಪಿ. ಹೆಗಡೆ.—ಸ್ವಾಮಿ, (ಅ) ಗೆ ಉತ್ತರವಾಗಿ ಚಿಕ್ಕೋಡಿ ಚುನಾವಣಾ ಕ್ಷೇತ್ರದಲ್ಲಿ ಈ 4 ಗ್ರಾಮಗಳಲ್ಲಿ ಅಂದರೆ ಬೆಳಗಲಿ, ಹಿರೆಕುಡಿಯ ಬಸನಾಳಗಡ್ಡೆ ಕೊಪ್ಪಲು, ಚಿಂಚೋಳಿಯ ಹಂದ್ಯಾನಾಥ ಕೊಪ್ಪಲು ಮತ್ತು ಚಿಂಚೋಳಿಯ ಕುಪನವಾಡಿ ಕೊಪ್ಪಲುಗಳಲ್ಲಿ ಕುಡಿಯುವ ನೀರಿನ ಬಾವಿಗಳು ಇಲ್ಲ ಎಂದು ಹೇಳಿದ್ದೀರಿ. ಅದುದರಿಂದ ಆ ಗ್ರಾಮಗಳಿಗೆ ಕುಡಿಯುವ ನೀರಿನ ಬಾವಿಗಳನ್ನು ಒದಗಿಸಿ ಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈ 4 ಗ್ರಾಮಗಳಲ್ಲಿ ಅಂದರೆ ಬೆಳಗಲಿ, ಹಿರೆಕುಡಿಯ ಬಸನಾಳಗಡ್ಡೆ ಕೊಪ್ಪಲು, ಚಿಂಚೋಳಿಯ ಹಂದ್ಯನಾಥ ಕೊಪ್ಪಲು ಮತ್ತು ಚಿಂಚೋಳಿಯ ಕುಪನಾಡಿ ಕೊಪ್ಪಲುಗಳಲ್ಲಿ ಕುಡಿಯುವ ನೀರಿನ ಅಭಾವ ಇದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆ. ಬೆಳಗಲಿಯಲ್ಲಿ ಒಂದು ನಾಲಾ ಪಕ್ಕದಲ್ಲಿ ಬಾವಿ ಕೆಲಸವನ್ನು ಪ್ರಾರಂಭ ಮಾಡಲಾಗಿದೆ ಮತ್ತು ಹಿರೆಕುಡಿಯ ಬಸನಾಳಗಡ್ಡೆ ಕೊಪ್ಪಲು ಮತ್ತು ಅದರ ಸುತ್ತಮುತ್ತ ಇರತಕ್ಕಂಥ ನೀರಿನವರೆ ಬಾವಿಗಳಿಂದ ನೀರನ್ನು ಆಳವಾಗಿ ತೋಡುವ ಕೆಲಸವನ್ನು ತೆಗೆದುಕೊಳ್ಳಲಾಗುತ್ತಿದೆ. ಆದರೆ ಆ ಪ್ರದೇಶದ ಜನರಿಂದ ಕುಡಿಯುವ ನೀರಿನ ಬಾವಿ ಬೇಕೆನ್ನುವ ಬೇಡಿಕೆ ಬಂದಿಲ್ಲ. ಈಗಾಗಲೇ ಅಲ್ಲಿಗೆ ಒಂದು ಬೋರ್‌ವೆಲ್‌ನ್ನು ಮಾಡಿಸಿಕೊಟ್ಟಿದ್ದೇವೆ. ಬೆಳಗಲಿ ಮತ್ತು ಚಿಂಚೋಳಿಯ ಕುಪನಾಡಿ ಕೊಪ್ಪಲು ಈ ಗ್ರಾಮದಲ್ಲಿ ಬೋರ್‌ವೆಲ್‌ನ್ನು ಮಾಡಿಸಿ ಕೊಟ್ಟಿದ್ದೇವು, ಆದರೆ ಅಲ್ಲಿ ನೀರು ಬರಲಿಲ್ಲ. ಆದ್ದರಿಂದ ಬೇರೆ ಒಂದು ಸ್ಕೀಮನ್ನು ತೆಗೆದುಕೊಂಡು ಬಾವಿಯ ಕೆಲಸವನ್ನು ಮಾಡಿಸಲಾಗುತ್ತದೆ.

ಶ್ರೀ ಪಿ. ಪಿ ಹೆಗಡೆ.—(ಅ) ಗೆ ಉತ್ತರವಾಗಿ ಅನುಸೂಚಿತ ಜಾತಿಯವರಿರುವ 34 ಗ್ರಾಮಗಳಿದ್ದು ಅವರಿಗಾಗಿ ಪ್ರತ್ಯೇಕ ಕುಡಿಯುವ ನೀರಿನ ಬಾವಿಗಳನ್ನೂ ದಗಿಸಿರುವುದಿಲ್ಲ ಎಂದು ಹೇಳಿದ್ದೀರಿ ಮತ್ತು (ಇ) ಗೆ ಉತ್ತರವಾಗಿ ಅನುಸೂಚಿತ ಜಾತಿಯವರು ಗ್ರಾಮ ಘಟಕದ ಅಂಗವಾಗಿದ್ದು ಗ್ರಾಮಗಳಿಗೆ ಒದಗಿಸಲಾದ ಕುಡಿಯುವ ನೀರಿನ ಸರಬರಾಜು ಸೌಲಭ್ಯಗಳು, ಅವರ ಬೇಡಿಕೆಗಳನ್ನು ಪೂರೈಸುತ್ತೇವೆ ಎಂದು ಅದನ್ನೂ ಹೇಳಿದ್ದೀರಿ. ಆದರೆ ಗ್ರಾಮಾಂತರ ಪ್ರದೇಶದಲ್ಲಿ ಅನುಸೂಚಿತ ಜಾತಿಯವರಿಗೆ ಸಾರ್ವಜನಿಕ ಬಾವಿಗಳಿಗೆ ಪ್ರವೇಶ ಇಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅವರಿಗೆ ಪ್ರತ್ಯೇಕವಾದ ಬಾವಿಗಳನ್ನು ಕೊಡತಕ್ಕಂಥಾದ್ದು ಸರ್ಕಾರದ ನೀತಿಯಾಗಿಲ್ಲ. ಆ ಬಾವಿಯಲ್ಲೇ ಅವರು ನೀರನ್ನು ತೆಗೆದುಕೊಂಡರೆ ಸರ್ಕಾರದ ಅಭ್ಯಂತರವಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಅನ್ಪೃಶ್ಯತೆ, ಜಾತೀಯತೆ ಇವೆಲ್ಲಾ ಇರುವುದರಿಂದ ಆ ಬಾವಿಯಲ್ಲಿ ಅವರು ನೀರನ್ನು ತೆಗೆದುಕೊಳ್ಳುತ್ತಾರೋ ಇಲ್ಲವೋ ? ಆದ್ದರಿಂದ ಆ ಬಾವಿಯಲ್ಲೇ ಅವರು ನೀರನ್ನು ತೆಗೆದುಕೊಳ್ಳುವುದಾದರೆ ಸರ್ಕಾರಕ್ಕೆ ಯಾವುದೇ ಆಗಲಿ ಅಭ್ಯಂತರವಿಲ್ಲ.

PROMOTION TO STAFF OF SURVEY SETTLEMENT AND LAND RECORDS DEPARTMENT.

371. Sri VIRUPAKSH M. GHADI (Haliyal).—

Will the Minister for Revenue be pleased to state :—

(*a*) whether it is a fact that non-qualied official (non-matriculates) are promoted to Class II posts in Survey Settlement and Land Records Department ;

(*b*) if so, whether Cadre and Recruitment Rules of erstwhile Governments, *viz.*, Bombay, Madras Hyderabad and Old Mysore areas permit promotions of officials holding less qualification than the minimum to higher ranks ;

(*c*) if not, the provisions under which the promotion of such officials are now ordered to Class II Posts ;

(*d*) the number of such persons who are promoted during the last three years in the Department of Survey, Settlement and Land Records ?

Sri N. HUTCHAMASTHY GOWDA (Minister for Revenue).—

(*a*) Yes.

(*b*) None of the Cadre and Recruitment Rules of the erstwhile States bar the promotion of non-matribulates to Class II Posts.

(*c*) Does not arise in view of reply to clause (*b*) above.

(*d*) Nine.

.ಶ್ರೀ ವಿ. ಎಮ್. ಘಾಡಿ.—ಸರ್ವೆ, ಸೆಟಲ್‌ಮೆಂಟ್ ಮತ್ತು ಲ್ಯಾಂಡ್ ರೆಕಾರ್ಡ್ಸ್ ಇಲಾಖೆಯಲ್ಲಿ ಮೆಟ್ರಿಕ್ ಪಾಸ್ ಆದವರಿಗೆ ಪ್ರಮೋಷನ್ ಕೊಡಬೇಕು ಎಂದು ಕಟ್ಟು ನಿಯಮ ಇರುವಾಗ ಮೆಟ್ರಿಕ್ ಪಾಸ್ ಆಗದೇ ಇದ್ದವರಿಗೆ ಏತಕ್ಕೆ ಕೊಟ್ಟಿದ್ದೀರಿ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮೆಟ್ರಿಕ್ ಪಾಸ್ ಆಗಲೇಬೇಕು ಎಂಬ ನಿಯಮ ಇಲ್ಲದೇ ಇರುವುದರಿಂದ ಪ್ರಮೋಕ್ಷನ್ ಕೊಟ್ಟಿದೆ.

ಶ್ರೀ ವಿ. ಎಂ. ಘಾಡಿ.—ಮೆಟ್ರಿಕ್ ಪಾಸ್ ಆಗಬೇಕು ಎನ್ನುವ ನಿಯಮ ಇದ್ದೇ ಇದೆ. ಆದ್ದರಿಂದ ಇವರಿಗೆ ಪ್ರಮೋಷನ್ ಕೊಟ್ಟಿರುವುದು ತಪ್ಪು. ಅದನ್ನು ವಿಶೇಷೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನಗೆ ಗೊತ್ತಿರುವ ಪ್ರಕಾರ ಆ ರೀತಿ ನಿಯಮ ಇಲ್ಲ. ಮಾನ್ಯ ಸದಸ್ಯರು ಆ ರೀತಿ ನಿಯಮ ಇದ್ದೇ ಇದೆ ಎಂದು ಹೇಳುವುದರಿಂದ ಮತ್ತೆ ಅದನ್ನು ಪರಿಶೀಲನೆ ಮಾಡಿ ನೋಡಿ ಹೇಳುತ್ತೇನೆ.

AREA OF BUILDINGS OCCUPIED BY MINISTERS

8. Sri S. BANGARAPPA (Sorab).—

Will the Chief Minister be pleased to state :—

(*a*) whether it is a fact that the Minister including the Chief Minister are residing in big buildings in Bangalore ;

(*b*) if so, the area of each building occupied by Ministers (please furnish the area of the entire residence, *i.e.*, open space and dimension of the building) ?

Sri D. DEVARAJ URS (Chief Minister).—

(*a*) The buildings that have been allotted to the Ministers including the Chief Minister were constructed taking into account the dignity, functions and responsibilities attached to these offices.

(*b*) The area of each building is furnished in the statement appended, from which it may be seen that the quarters allotted to them are used for (1) Residence, (2) Office rooms, (3) Guest rooms and (4) Private apartments. The plinth area is commensurate with the various purposes for which it is being used and is commencurate with the functions of the Ministers.